ಕಾರ್ಡ್ ರೀಡರ್‌ಗಳನ್ನು ಅಡಗಿಸಿ ಇಟ್ಟಿರುತ್ತಾರೆ. ಅದು ಕಾರ್ಡ್‌ನ ಮ್ಯಾಗ್ನೆಟಿಕ್ ಸ್ಟ್ರಿಪ್‌ನಲ್ಲಿರುವ ಎಲ್ಲ ವಿವರಗಳನ್ನು ದಾಖಲಿಸುತ್ತದೆ. ಈ ಎಲ್ಲ ವಿವರಗಳನ್ನು ಡುಪ್ಲಿಕೇಟ್ ಕಾರ್ಡ್‌ಗಳಿಗೆ ಅಳವಡಿಸಿಕೊಂಡು ವಂಚಕರು ನಿಮ್ಮ ಹಣವನ್ನು ಎಗರಿಸುತ್ತಾರೆ. ಗ್ರಾಹಕರಿಗೆ ಗೊತ್ತಿಲ್ಲದಂತೆಯೇ ಡುಪ್ಲಿಕೇಟ್ ಕಾರ್ಡ್ ಬೇರೆಡೆ ಬಳಕೆಯಾಗುತ್ತದೆ. ಕಾರ್ಡ್ ಬಳಕೆಯಾದ ಬಳಿಕ ಮೊಬೈಲ್‌ಗೆ ಎಸ್‌ಎಂಎಸ್ ಬಂದಾಗಲೇ ವಂಚನೆ ಗೊತ್ತಾಗುವುದು. ಎಟಿಎಂಗಳಲ್ಲಿ ನಕಲಿ ಕೀಪ್ಯಾಡ್ ಮತ್ತು ಕ್ಯಾಮೆರಾಗಳನ್ನು ಅಡಗಿಸಿಟ್ಟು ಕೂಡಾ ವಂಚಕರು ಪಿನ್‌ಕೋಡ್‌ಗಳನ್ನು ಮತ್ತು ಕಾರ್ಡ್ ವಿವರಗಳನ್ನು ಪಡೆದುಕೊಳ್ಳುವುದಿದೆ.

ಕಾರ್ಡ್‌ಗಳ ಕ್ಲೋನಿಂಗ್ ಮಾಡುವ ಮೂಲಕ ವಂಚನೆ ಮಾಡುವ ದೊಡ್ಡ ಅಂತರರಾಷ್ಟ್ರೀಯ ಜಾಲವೊಂದನ್ನು ಸಿಂಗಾಪುರದಲ್ಲಿ ಕಳೆದ ವರ್ಷ ಪತ್ತೆ ಮಾಡಲಾಗಿತ್ತು. ಬಿರ್ಲಾ ಕಂಪೆನಿಯ ಮಾಲೀಕ ಕುಮಾರಮಂಗಲಂ ಅವರು ಮುಂಬೈಯಲ್ಲಿ ತಮ್ಮನ ಕಚೇರಿಯಲ್ಲಿ ಮೀಟಿಂಗ್‌ನಲ್ಲಿ ಇದ್ದ ಸಮಯದಲ್ಲೇ ಬೆಂಗಳೂರಿನಲ್ಲಿ ಅವರ ಕ್ರೆಡಿಟ್ ಕಾರ್ಡ್ ಬಳಸಿ ವಂಚಕನೊಬ್ಬ ಲಕ್ಷಾಂತರ ರೂಪಾಯಿ ಮೌಲ್ಯದ ಎಲೆಕ್ಟ್ರಾನಿಕ್ ವಸ್ತುಗಳನ್ನು ಖರೀದಿಸಿ ವಂಚಿಸಿದ್ದು ಕಳೆದ ವರ್ಷ ಪತ್ರಿಕೆಗಳಲ್ಲಿ ದೊಡ್ಡ ಸುದ್ದಿಯಾಗಿತ್ತು. ಕಾರ್ಡ್‌ಗಳ ಮಾಹಿತಿಗಳನ್ನು ಅಂತರ್ಜಾಲದ ಮೂಲಕ ಪಡೆದು ಕ್ಲೋನಿಂಗ್ ಮಾಡಿ ಕಾರ್ಡ್‌ಗಳನ್ನು ತಯಾರಿಸಿ ಈ ವಂಚನೆ ನಡೆಸಿದ್ದು ಬಯಲಿಗೆ ಬಂದಿತ್ತು. ಎಟಿಎಂ ಕಾರ್ಡ್ ವಂಚನೆಯ ಮೊದಲ ಪ್ರಕರಣ ವರದಿಯಾದದ್ದು 1993ರಲ್ಲಿ. ಅಲ್ಲಿಂದೀಚೆಗೆ ತಂತ್ರಜ್ಞಾನ ಬೆಳೆದಂತೆ ವಂಚನೆಗಳ ಪ್ರಕರಣಗಳೂ ಏರುತ್ತಲೇ ಇವೆ. ಇತ್ತೀಚೆಗೆ ಎಟಿಎಂ ಮಾಲ್‌ವೇರ್ ಸೋಂಕಿನಿಂದಾಗಿ ಬ್ಯಾಂಕುಗಳು ಒಟ್ಟು 32 ಲಕ್ಷ ಡೆಬಿಟ್ ಕಾರ್ಡ್‌ಗಳನ್ನು ಹಿಂದಕ್ಕೆ ಪಡೆದದ್ದೂ ದೊಡ್ಡ ಸುದ್ದಿಯಾಯಿತು.

ಆನ್‌ಲೈನ್ ವಹಿವಾಟು ಜನಪ್ರಿಯಗೊಳಿಸುವಲ್ಲಿ ಸರ್ಕಾರ ಇನ್ನಷ್ಟು ಶ್ರಮ ವಹಿಸಬೇಕಿದೆ. ನೂರೆಂಟು ಭಾಷೆಗಳಿರುವ ದೇಶ ನಮ್ಮದು. ಬ್ಯಾಂಕ್‌ಗಳು ಗ್ರಾಹಕಸ್ನೇಹಿ ಆ್ಯಪ್‌ಗಳನ್ನು ರೂಪಿಸಬೇಕು. ಪ್ರಾದೇಶಿಕ ಭಾಷೆಗಳಲ್ಲಿ ಆ್ಯಪ್‌ಗಳು ಬಂದರೆ ಅನುಕೂಲ ಹೆಚ್ಚು. ಅದರಲ್ಲೂ ಸರ್ಕಾರಿ ಏಜೆನ್ಸಿಗಳು ಹೆಚ್ಚು ಜನಸ್ನೇಹಿ ಆ್ಯಪ್‌ಗಳನ್ನು ರೂಪಿಸಬೇಕು. ಬಿಎಸ್‌ಎನ್‌ಎಲ್‌ನಂತಹ ಸರ್ಕಾರಿ ಸಂಸ್ಥೆಗಳು ಬಿಲ್‌ಪಾವತಿಗೆ ಆನ್‌ಲೈನ್ ಸೌಲಭ್ಯ ಒದಗಿಸಿದ್ದರೂ ಅಲ್ಲಿ ನೂರೆಂಟು ತಾಂತ್ರಿಕ ತೊಂದರೆಗಳಿರುತ್ತವೆ.

ನಗದುರಹಿತ ವಹಿವಾಟಿಗೆ ಉತ್ತೇಜನ ನೀಡುವ ಸಲುವಾಗಿ ಗ್ರಾಹಕರಿಗೆ ಮತ್ತು ವ್ಯಾಪಾರಿಗಳಿಗೆ ಕೇಂದ್ರ ಸರಕಾರ ವಿಶೇಷ ನಗದು ಬಹುಮಾನ ಯೋಜನೆಗಳನ್ನು ಪ್ರಕಟಿಸಿದೆ. ಬಡವರು, ಮಧ್ಯಮವರ್ಗ ಮತ್ತು ಸಣ್ಣ ಉದ್ಯಮಿಗಳನ್ನು ಡಿಜಿಟಲ್ ಪಾವತಿ ವ್ಯವಸ್ಥೆಗೆ ಕರೆತರಲು ಈ ವ್ಯವಸ್ಥೆ ಎಂದು ಸರ್ಕಾರ ಪ್ರಕಟಿಸಿದೆ. 50 ರೂಪಾಯಿಯಿಂದ ತೊಡಗಿ 3 ಸಾವಿರ ರೂಪಾಯಿವರೆಗೆ ಪಾವತಿ ಮಾಡುವವರಿಗೆ ಈ ಯೋಜನೆ ಅನ್ವಯವಾಗುತ್ತಿದೆ. ಅದರಲ್ಲೂ ಯುಪಿಐ, ಸಾಮಾನ್ಯ ಫೋನ್, ಯುಎಸ್‌ಎಸ್‌ಡಿ, ರೂಪೆ ಕಾರ್ಡ್ ಮತ್ತು ಆಧಾರ್ ಅಧಾರಿತ ವ್ಯವಸ್ಥೆಯ ಮೂಲಕ ಪಾವತಿಸಿದವರಿಗೆ ಏಪ್ರಿಲ್‌ವರೆಗೆ ಈ ಸ್ಕೀಮ್ ಅನ್ವಯವಾಗುತ್ತಿದೆ. ಇಂತಹ ಯೋಜನೆಗಳು ತತ್ಕಾಲೀನ ಜನಪ್ರಿಯ ಯೋಜನೆಗಳಾಗಬಹುದೇ ಹೊರತು ಜನಸಾಮಾನ್ಯರನ್ನು ಡಿಜಿಟಲ್ ಪಾವತಿ ವ್ಯವಸ್ಥೆಗೆ ಒಗ್ಗಿಸುವ ಬಗ್ಗೆ ಖಾತ್ರಿ ಇಲ್ಲ.

ಮುಖ್ಯವಾಗಿ ಆನ್‌ಲೈನ್ ವಹಿವಾಟು ದುಬಾರಿ ವಹಿವಾಟು ಆಗಬಾರದು.

